ಕರ್ನಾಟಕ ವಿಧಾನ ಸಭೆ

ಶುಕ್ರವಾರ 2ನೇ ಏಪ್ರಿಲ್ 1993
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 9-50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ವಿ.ಎಸ್.ಕೌಜಲಗಿ ಅವರು
ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು:-ಮಾನ್ಯ ಸದಸ್ಯರಾದ ನಾಗರಾಜ್‌ರವರು ವರದಿಯನ್ನು ಒಪ್ಪಿಸುವುದು.
(ಸದಸ್ಯರು ಗೈರುಹಾಜರು)

ವ.ಅ ॥ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:-ಬಿಜಾಪುರ ಜಿಲ್ಲಾ ಆರೋಗ್ಯ ಕಚೇರಿಯಲ್ಲಿ ನಡೆಯಿತೆನ್ನಲಾದ ಅವ್ಯವಹಾರದ ಬಗ್ಗೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ತಮ್ಮ ಅನುಮತಿ ಪಡೆದಿದ್ದೆ. ಈ ವರ್ಷದ ಒಂದು ದೊಡ್ಡ ಹಗರಣ ಬಿಜಾಪುರ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸ್‌ನಲ್ಲಿ ಆಗಿದೆ. ಈಗಾಗಲೇ ಇದು ಸರ್ಕಾರದ ಗಮನಕ್ಕೂ ಬಂದಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇದರ ಬಗ್ಗೆ ಯಾವ ಒಂದು ಕ್ರಮವೂ ಸರ್ಕಾರದಿಂದ ಆಗಿಲ್ಲ. ಇವತ್ತು ಇಲ್ಲಿ ರೈಸ್ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸ್‌ನಲ್ಲಿ ಬಾಲ್‌ರಾಜ್ ಎಂದು ಒಬ್ಬ ಡಿಸ್ಟ್ರಿಕ್ಟ ಹೆಲ್ತ್ ಆಫೀಸರ್ ಇದ್ದಾರೆ. 20 ವರ್ಷಗಳ ಹಿಂದೆ ಅಲ್ಲಿಗೆ ಅವರಿಗೆ ಟ್ರಾನ್ಸ್‌ಫರ್ ಆಗಿದೆ ಮತ್ತೊಬ್ಬ ಗಡಿಯಾಳ್ ಎಂದು ಅಲ್ಲಿ ಗೆಜೆಟೆಡ್ ಆಫೀಸರ್ ಇದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ 25 ವರ್ಷಗಳಿಂದ ಬೇರೆ ಬೇರೆ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರದು ಬಹಳ ಕ್ಯಾರೆಕ್ಟರ್ ನಾನು ಜಿಲ್ಲಾಧಿಕಾರಿ. ಬಿಜಾಪುರ ಸಂಪರ್ಕ ಮಾಡಿ ಸಾಕಷ್ಟು ತಿಳಿದುಕೊಂಡಿದ್ದೇನೆ. ಈ shabby ಕ್ಯಾರೆಕ್ಟರ್ ಗಡಿಯಾಳ್ 1983ರಲ್ಲಿ he raped even a minor girl. ಇಷ್ಟೊಂದು shabby ಕ್ಯಾರೆಕ್ಟರ್ ಇವನಿಗೆ ಏನು ಆಗಿದೆ ಸ್ವಾಮಿ. ನಮ್ಮ ಸರ್ಕಾರದ ಆದೇಶ ಇದೆ. ನಮ್ಮಲ್ಲಿ ಲೆಪ್ರಸಿ ಯಾರು ಇದ್ದಾರೆ, ಕುಷ್ಠರೋಗಿ ಯಾರು ಇದ್ದಾರೆ ಅವರು ಗುಣ ಆದರೆ ಅವರಿಗೆ 'ಡಿ' ಕ್ಲಾಸ್ ಹುದ್ದೆಗೆ ನೌಕರಿ ಕೊಡಬೇಕು ಅದು ಸರ್ಕಾರದ ಆದೇಶ ಇದೆ. ಇವೊತ್ತು, ಈ ಗೆಜೆಟೆಡ್ ಅಸಿಸ್ಟಂಟ್ ಮತ್ತು ಡಿ..ಹೆಚ್.ಓ ಏನು ಮಾಡಿದರು ಎಂದರೆ ಮಂಡ್ಯ ಜಿಲ್ಲೆಯಲ್ಲಿ ಕೋಲಾರ್ ಜಿಲ್ಲೆಯಲ್ಲಿ, ಮೈಸೂರು ಜಿಲ್ಲೆಯಲ್ಲಿ ತನ್ನ ಏಜೆಂಟರನ್ನು ಕಳುಹಿಸಿ ಅಲ್ಲಿ ಇದ್ದ ಕೆಲವು ಲೋಯರ್ ಲೆವೆಲ್ ಆಫೀಸರ್ಸ್‌ಗೆ ಬ್ರೈಬ್ ಮಾಡಿ ಏನು ಲೆಪ್ರಸಿ ಬಗ್ಗೆ ಅಪ್ಲಿಕೇಷನ್ ಕೊಡಬೇಕು ಅದಕ್ಕೆ ಡಿ.ಹೆಚ್.ಓ. ಆಫೀಸಿನಿಂದ ಶಿಫಾರಸ್ಸು ಬೇಕಾಗುತ್ತದೆ, ಆ ಡಿ.ಹೆಚ್.ಓ. ಆಫೀಸಿನಿಂದ ಲೋಯರ್ ಲೆವಲ್ ಸ್ಟಾಫ್ ಪಡೆದುಕೊಂಡು ಆ ಫಾರಂ ಮೇಲೆ ಮಂಡ್ಯ ಡಿ.ಹೆಚ್.ಓ, ಕೋಲಾರ್ ಡಿ.ಹೆಚ್.ಓ, ಅಂತ ಸೀಲ್ ಹಾಕಿಕೊಂಡು ಆ ಫಾರಂ ಬಿಜಾಪುರದಲ್ಲಿ ತಂದು ಆ ಫಾರಂ ತುಂಬಿ 56 ಜನರಿಗೆ 'ಡಿ' ಕ್ಲಾಸಿಗೆ ನೌಕರಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಶೇಡ 60 ರಷ್ಟು ಜನ ಅವರು ಕುಷ್ಠ ರೋಗಿಯಾಗಿದ್ದರೂ ಇವೊತ್ತು ಗುಣ ಆಗಿದ ಹಾಗಾಗೀ ಇಂತಿಂಥ ಸರ್ಕಾರಿ ಆಜ್ಞೆ ಪ್ರಕಾರ ಅವರಿಗೆ ನೌಕರಿ ಕೊಟ್ಟಿದ್ದೇವೆ ಎಂದು ಆದೇಶ ಮಾಡಿದ್ದಾರೆ. ಜಿಲ್ಲಾಧಿ ಕಾರಿಗಳಿಗೆ ನಾನು ಮಾತನಾಡಿ ಏನಾಗಿದೆ ಎಂದು ಕೇಳಿದ್ದೇನೆ, ಅವರು ಇದರ ಬಗ್ಗೆ ವೆರಿಫಿಕೇಷನ್ ಮಾಡುತ್ತಿದ್ದೇನೆಂದು ಹೇಳಿದ್ದಾರೆ. ಈಗಾಗಲೇ ಎಂಟು ಕೇಸುಗಳನ್ನು ವೆರಿಫಿಕೇಶನ್ ಮಾಡಿದ್ದೇನೆ ಅದರಲ್ಲಿ ಐದು ಜನ ಕುಷ್ಠ ರೋಗಿಗಳು ಇರಲಿಲ್ಲ ಎಂದು

ಹೇಳಿದ್ದಾರೆ, ಮೂರು ಜನ ಕುಷ್ಠರೋಗಿ ಇದ್ದಾರೆ ಎಂದೂ ಸಹ ಹೇಳಿದ್ದಾರೆ. ಯಾವ ಪ್ರಕಾರ ಸರ್ಕಾರದಲ್ಲಿ ಕೆಲಸ ನಡೆದಿದೆ ಇದನ್ನು ನಾವು ನೋಡಬೇಕಾಗಿದೆ. ಬಡವರಿಗೆ ಒಂದು ಕಡೆ ನೌಕರಿ ಇಲ್ಲ, ಮತ್ತೊಂದು ಕಡೆ ಮುಖ್ಯಮಂತ್ರಿಗಳು ಹೇಳುತ್ತಾರೆ ನಾನು ಸ್ವಚ್ಛ ಸರ್ಕಾರ ಕೊಡುತ್ತೇನೆಂದು. ಆದರೆ ನಾನು ಏನು ಹೇಳಿದೆ ಅಂದರೆ ವಿಧಾನ ಸೌಧದಲ್ಲಿ ಅಷ್ಟೇ, ಸೆಕ್ರೆಟೇರಿಯೇಟ್‌ದಲ್ಲಿ ಮಾತ್ರ ಅಧಿಕಾರ ಬದಲಾವಣೆ ಆದರೆ ನಿಮಗೆ ಒಳ್ಳೆಯ ಅಡ್ಮಿನಿಸ್ಟ್ರೇಷನ್ ಬರುವುದಿಲ್ಲ, ಕೆಳಮಟ್ಟಕ್ಕೂ ಹೋಗಬೇಕಾದರೆ ನೀವು, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲೂ ಕೂಡ ತಾವು ಒಳ್ಳೆಯ ಅಡ್ಮಿನಿಸ್ಟ್ರೇಷನ್ ತರಬೇಕಾಗುತ್ತದೆ, ಎಲ್ಲಿಯವರೆಗೆ ನೀವು ಅಲ್ಲಿ ಕ್ರಮ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಏನೂ ಆಗುವುದಿಲ್ಲ. ಅಲ್ಲಿ ಕುಷ್ಠ ರೋಗಿಗಳ ಹೆಸರಿನಲ್ಲಿ ಒಂದು ಸಂದರ್ಭವನ್ನು ಉಪಯೋಗಿಸಿ ಬಹಳ ದೊಡ್ಡ ಫ್ರಾಡನ್ನು ಮಾಡಿದ್ದಾರೆ, ಇಷ್ಟೇ ಅಲ್ಲ ಸ್ವಾಮಿ ಇವೊತ್ತು ದವಾಖಾನೆಯಲ್ಲಿ ಔಷಧಿಗಳಿಲ್ಲ, ನಾವು ಎಲ್ಲಾ ಶಾಸಕರು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ, ಔಷಧಿ ಇಲ್ಲ, ಔಷಧಿ ಕಳುಹಿಸಿ ಎಂದು ಹೇಳುತ್ತಾ ಇದ್ದರೆ, ಅಲ್ಲಿ ಅವರು ಏನು ಮಾಡಿದ್ದಾರೆಂದರೆ ಅವರಿಗೆ ಗ್ರ್ಯಾಂಟ್ ಇರುವುದು 25 ಲಕ್ಷ, ಅವರು ಖರೀದಿ ಮಾಡಿದ ಔಷಧಿ 61ಲಕ್ಷ, ಮೊದಲ ಬಾರಿ 35 ಲಕ್ಷ ರೂಪಾಯಿಗಳ ಔಷಧಿ ತೆಗೆದುಕೊಂಡರು, ಎರಡನೆಯ ಬಾರಿ 26 ಲಕ್ಷ ರೂಪಾಯಿ ಔಷಧಿ ತೆಗೆದುಕೊಂಡರು ಏನು ಮಾಡಿದರು ಎಂದರೆ ಔಷಧಿ ಬಿಲ್ ಮಾತ್ರ ಬಂದಿದೆ, ಔಷಧಿ ಬಿಲ್ಲು ಬರಲಿಲ್ಲ. ಕೇವಲ ಹದಿನಾಲ್ಕು ಲಕ್ಷ ರೂ. ಔಷಧಿ ಮಾತ್ರ ಬಂದಿದ್ದು ಬಾಕೀ ಎಲ್ಲಾ ಫೋರ್ಜರಿ ಮಾಡಿದ್ದಾರೆ. ಎಲ್ಲಾ ಹಣ ಖರ್ಚು ಹಾಕಿ ಈ ಡಿ.ಹೆಚ್.ಓ ಗೆಜೆಟೆಡ್ ಅಸಿಸ್ಟೆಂಟ್ ಮತ್ತು ಕೆಲವು ಜನ ಹಣ ನುಂಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬರಬೇಕಾಗಿತ್ತು. ಡಿ.ಹೆಚ್.ಓ ಗೆ ಯಾವಾಗ ಇಪ್ಪತ್ತು ದಿವಸದ ಹಿಂದೆ ಟ್ರಾನ್ಸ್‌ಫರ್ ಮಾಡಿದ್ದೀರಿ ಅದು ಇರಬಹುದು, ಆದರೆ ಇಲ್ಲಿಯವರೆಗೆ ಅದರ ಬಗ್ಗೆ ಕ್ರಮ ಯಾಕೆ ತೆಗೆದುಕೊಳ್ಳಲಿಲ್ಲ ಅದನ್ನು ನಾನು ಸರ್ಕಾರಕ್ಕೆ ಕೇಳುತ್ತೇನೆ? ಇವೊತ್ತು ಸರ್ಕಾರ ಯಾಕೆ ಸರ್ಕಾರ ಡಿ.ಹೆಚ್.ಓ ಮತ್ತು ಗೆಜೆಟೆಡ್ ಅಸಿಸ್ಟೆಂಟ್‌ಗೆ ಶೀಲ್ಡ್ ಮಾಡುತ್ತಾ ಇದೆ. ಸರ್ಕಾರಕ್ಕೆ ಯಾವ ಪ್ರಕಾರ ದುರ್ವ್ಯವಹಾರ ನಡೆಸಿದೆ, ದೊಡ್ಡ ಫ್ರಾಡ್ ನಡೆದಿದೆ ಅಂತ ಗೊತ್ತಾಗಿದೆ. ಮಾನ್ಯ ಅಧ್ಯಕ್ಷರೇ ಇವೊತ್ತು ಸರ್ಕಾರದ ಆದೇಶ ಏನು ಇದೆ. ಔಷಧಿ ತೆಗೆದುಕೊಳ್ಳಬೇಕೆಂದು, ಅದು ಇಲ್ಲದಿದ್ದರೆ ರೇಟ್ ಕಾಂಟ್ರ್ಯಾಕ್ಟ್ ಎಲ್ಲಿ ಇದೆ ಅಲ್ಲಿ ತೆಗೆದುಕೊಳ್ಳಬೇಕು ಎಂದು ಎರಡನೆಯದು, ಮೂರನೆಯದು ಈ ಕರ್ನಾಟಕ ಸ್ಮಾಲ್ ಇಂಡಸ್ಟ್ರೀಸ್ ಮಾರ್ಕೆಟಿಂಗ್ ಕಾರ್ಪೊರೇಷನ್ ಇದೆ ಅದರ ಮೂಲಕ ತೆಗೆದುಕೊಳ್ಳಬೇಕು ಎಂದು ಇದೆ. ಇವರು ಇದನ್ನೆಲ್ಲಾ ಉಲ್ಲಂಘನೆ ಮಾಡಿದ್ದಾರೆ, ಕಾಯಿದೆ, ಕಾನೂನು, ರೂಲ್ಸ್, ರೆಗ್ಯೂಲೇಷನ್ಸ್‌ನ್ನು ಬಿಟ್ಟು ಈ ಡಿ.ಹೆಚ್.ಓ ಮತ್ತು ಗೆಜೆಟೆಡ್ ಅಸಿಸ್ಟೆಂಟ್ ಇವೊತ್ತು ಈ ಔಷಧಿ ಖರೀದಿ ಮಾಡಿದ್ದಾರೆ ಜಿಲ್ಲಾಧಿಕಾರಿಗಳಿಗೆ ನಾನು ಸಂಪರ್ಕ ಮಾಡಿ ಕೇಳಿದೆ, ಇದರ ಬಗ್ಗೆ ಅವರು ಹೇಳಿದರು ಇದು ಫ್ಯಾಕ್ಟ್ ಇದೆ, ಸ್ವಾಮಿ ಇದು ನಿಜ ಇದೆ ಎಂದು ಜಿಲ್ಲಾಧಿಕಾರಿಗಳು ನನಗೆ ಹೇಳಿದ್ದಾರೆ. ಬೇಕಾದರೆ ಮುಖ್ಯಮಂತ್ರಿಗಳು ಇದರ ಬಗ್ಗೆ ವೆರಿಫೈ ಮಾಡಬಹುದು. ಇವೊತ್ತು ಇಂತಹ ಒಂದು ದೊಡ್ಡ ಹಗರಣ ಆದಾಗ ಸರ್ಕಾರದಿಂದ ಯಾವುದೂ ಕ್ರಮ ಇಲ್ಲ. ಒಂದು ಕಡೆ ದವಾಖಾನೆಗೆ ಕಟ್ಟಡ ಇಲ್ಲ, ಔಷಧಿ ಇಲ್ಲ, ಅಂತ ಬಹಳ ಜನತೆಗೆ ಸೌಕರ್ಯ ಸಿಗುತ್ತಾ ಇಲ್ಲ ಮತ್ತೊಂದು ಕಡೆ ಇಂಥ ನೀಚ ಅಧಿಕಾರಿಗಳು ಭ್ರಷ್ಟ ಅಧಿಕಾರಿಗಳು, ಈ ಪ್ರಕಾರ ಅವರು ದಬ್ಬಾಳಿಕೆ ಮಾಡಿ, ಈ ಪ್ರಕಾರ ಭ್ರಷ್ಟಾಚಾರ ಮಾಡಿ ಫೋರ್ಜರಿ ರಿಕಾರ್ಡ್ ಕ್ರಿಯೇಟ್ ಮಾಡಿ, ಇವೊತ್ತು ಸರ್ಕಾರದ ಹಣದ ದುರ್ವ್ಯವಹಾರ ಮಾಡುತ್ತಿದ್ದಾರೆ. ಸರ್ಕಾರದ ಹಣ ಈ ರೀತಿ ದುರುಪಯೋಗ ಮಾಡುತ್ತಿದ್ದಾರೆ, ಇದರ ಬಗ್ಗೆ ಕ್ರಮ ಯಾರೂ ತೆಗೆದುಕೊಳ್ಳಬೇಕು.

• ಇವತ್ತು ನಮ್ಮ ಜನತಾ ದಳದಿಂದ, ಎಸ್.ಜೆ.ಪಿ. ಸಿ. ಪಿ.ಐ. ನಿಂದ ಮೆಮೊರ್ಯಾಂಡಂನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ನಾನಾದರೂ ಹೇಳುತ್ತೇನೆ, ಇದು ಈ ವರ್ಷದ ಅತಿ ದೊಡ್ಡ ಸ್ಕಾಂಡಲ್. ಇದು ನೇಮಕಾತಿ ಮತ್ತು ಔಷಧಿಗಳ ಖರೀದಿಗೆ ಸಂಬಂಧಪಟ್ಟಂತೆ. ಇಂಥ ನೀಚ ಅಧಿಕಾರಿಗೆ ನೀವು ರಕ್ಷಣೆಯನ್ನು ಕೊಟ್ಟರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಬಹುದು. ಆದರೆ ಅದು ಬೇಡ. ಈ ಹಗರಣದಲ್ಲಿ ಯಾರು ತಪ್ಪಿತಸ್ಥರಿದ್ದಾರೆ

ಅವರನ್ನು ಕಂಡುಹಿಡಿಯಬೇಕಾದರೆ ತಾವು ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡಿಸಬೇಕಾಗುತ್ತದೆ. ಲೋಕಲ್ ಆಫೀಸರ್ಸ್‌ನಿಂದ ಇದು ಸಾಧ್ಯವಿಲ್ಲ. ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಬೇಕು. ಈ ಅಧಿಕಾರಿ ಗೆಜೆಟೆಡ್ ಅಸಿಸ್ಟೆಂಟ್ ಆಗಿದ್ದಾನೆ; ಇವನದು ಶ್ಯಾಡಿ ಕ್ಯಾರೆಕ್ಟರ್. ಇವನು ಒಬ್ಬ ಹುಡುಗಿಯನ್ನು ರೇಪ್ ಮಾಡಿದ್ದಾನೆಂದು 1983ರಲ್ಲಿ ನಾನು ಹೇಳಿದೆ. ಕಳೆದ 25 ವರ್ಷದಿಂದ ಅವನು ಅಲ್ಲೇ ಇದ್ದಾನೆ. ಇವನು ಮಾಡಿರುವ ಕೆಲಸಕ್ಕೆ ಇವತ್ತು ಸಸ್ಪೆಂಡ್ ಮಾಡಬೇಕಾಗುತ್ತದೆ. ಡಿ.ಹೆಚ್.ಒ ಕೂಡ ಕೂಡ ಸಸ್ಪೆಂಡ್ ಆಗಬೇಕಾಗುತ್ತದೆ. 61 ಲಕ್ಷ ರೂಗಳ ಹಣ ಕೂಡ ಇವರಿಂದ ರಿಕವರಿ ಆಗಬೇಕಾಗಿದೆ. ಇವತ್ತು ಸಿ. ಓ.ಡಿ ಎನ್‌ಕ್ವೈರಿ ಮಾಡಿಸುತ್ತೀರಿ. ಅವನಿಗೆ ಶಿಕ್ಷೆಯೂ ಆಗುತ್ತದೆ. ಆದರೆ ಸರ್ಕಾರಕ್ಕೆ ಬರಬೇಕಾದ ಹಣವನ್ನು ಕೊಡುವವರು ಯಾರು? ನಾನಾದರೂ ಹೇಳುತ್ತೇನೆ, ಇವನ ಪ್ರಾಪರ್ಟಿಯನ್ನು ಅಟ್ಯಾಚ್ ಮಾಡಿ. ಇವನಿಂದ ಹಣವನ್ನು ರಿಕವರಿ ಮಾಡುವುದಕ್ಕೆ ಮತ್ತು ಇವರನ್ನು ಸಸ್ಪೆಂಡ್ ಮಾಡುವುದಕ್ಕೆ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ದಕ್ಷ ಆಡಳಿತವನ್ನು ಜನತೆಗೆ ಕೊಡುತ್ತೇನೆಂದು ಹೇಳಿದಂಥ ಮಾನ್ಯ ವೀರಪ್ಪಮೊಯಲಿಯವರ ಆಡಳಿತದಲ್ಲಿ ಇಂಥಾದ್ದು ಆಗಿರುವುದನ್ನು ನೋಡಿ ನಮಗೆ ನಾಚಿಕೆ ಬರುತ್ತಿದೆ. ಇಷ್ಟರೊಳಗೆ ತಾವು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಮಗೆ ಗೊತ್ತಾಗುತ್ತಿಲ್ಲ. ಯಾರು ಇವರನ್ನು ಷೀಲ್ಡಿಂಗ್ ಮಾಡುತ್ತಿದ್ದಾರೆ. ಎಂದು ನಮಗೆ ಗೊತ್ತಾಗುತ್ತಿಲ್ಲ. ಈಗ ನಾವು ಏನು ವಿಚಾರವನ್ನು ಪ್ರಸ್ತಾವ ಮಾಡಿದ್ದೇವೆ ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಸತ್ಯಾಂಶ ಹೊರಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದೇ ರೀತಿಯ ಇನ್ನೊಂದು ಸ್ಕ್ಯಾಂಡಲ್ ಬಿಜಾಪುರದಲ್ಲಿ ಕೂಡ ಆಗಿದೆ. ಇಂಥಾದ್ದೇ ಇನ್ನೂ ಬೇರೆ ಬೇರೆ ಜಿಲ್ಲೆಗಳಲ್ಲೂ ಆಗಿರಬಹುದು. ಇಲ್ಲಿ ಏನಾಗಿದೆ ಎಂದರೆ ಕೆಲವು ಔಷಧಿಗಳನ್ನು ಜಿಲ್ಲಾ ಪರಿಷತ್ತಿನವರು ಖರೀದಿ ಮಾಡುತ್ತಾರೆ. ಇನ್ನು ಕೆಲವನ್ನು ಹೆಲ್ತ್ ಡೈರಕ್ಟರ್‌ರವರು ಖರೀದಿ ಮಾಡಿ ಕಳುಹಿಸುತ್ತಾರೆ. ಇದರಲ್ಲಿ ಸರಿಯಾದ ಕೋ ಆರ್ಡಿನೇಷನ್ ಇಲ್ಲ. ಸರಿಯಾದ ಮಾನಿಟರಿಂಗ್ ಇಲ್ಲ. ಇವರು ಕೊಡತಕ್ಕ ಔಷಧಿಗಳು ಯಾವ ಯಾವ ದವಾಖಾನೆಗಳಿಗೆ ಮುಟ್ಟಬೇಕೊ ಅಲ್ಲಿಗೆ ಮುಟ್ಟುತ್ತಿಲ್ಲ. ಈ ಔಷದಿಗಳು ಖರೀದಿ ಕೂಡ ಸರಿಯಾಗಿ ಆಗಿಲ್ಲ. ಇದರ ಬಗ್ಗೆ ತಾವು ಗಮನಹರಿಸಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇದರಲ್ಲಿ ಒಂದು ದೊಡ್ಡ ರಾಕೆಟ್ಟೇ ಇದೆ. ಕೆಲವೇ ಕೆಲವು ಇಂಡಸ್ಟ್ರೀಸ್ ಇವೆ. ಅವುಗಳು ಔಷಧಿಗಳನ್ನೇ ತಯಾರಿಸುವುದಿಲ್ಲ. ಇನ್ನು ಕೆಲವು ಕಂಪೆನಿಗಳು ಒಳ್ಳೆಯ ಕ್ವಾಲಿಟಿಯ ಔಷಧಿಗಳನ್ನು ತಯಾರಿಸುವುದಿಲ್ಲ. ಈ ಕಂಪೆನಿಗಳಿಗೂ ಮತ್ತು ಆರೋಗ್ಯ ಇಲಾಖೆಗೂ ಸಂಬಂಧ ಇದೆ. ನೀವು ಯಾವುದೇ ದವಾಖಾನೆಗೇ ಹೋದರೂ ಒಂದೇ ರೀತಿಯ ಟ್ಯಾಬ್ಲೆಟ್ಸ್, ಔಷಧಿ ಕೊಡುತ್ತಾರೆ. ಆದರೆ ಆ ಏರಿಯ ಯಾವುದು? ಅಲ್ಲಿ ಯಾವರೀತಿಯ ರೋಗ ಇದೆ? ಅಲ್ಲಿಗೆ ಯಾವ ಔಷಧಿಗಳನ್ನು ಸಪ್ಲೈ ಮಾಡಬೇಕು ಎಂಬುದನ್ನು ಯೋಚನೆಯನ್ನೇ ಮಾಡುವುದಿಲ್ಲ. ಹೋಲ್‌ಸೇಲ್ ಆಗಿ ಮೆಡಿಸನ್ಸ್ ಕಳುಹಿಸುತ್ತಾರೆ. ಇನ್‌ಫೀರಿಯರ್ ಮೆಡಿಸನ್ಸ್‌ನ್ನು ಕಳುಹಿಸುತ್ತಾರೆ. ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಈ ಆರೋಗ್ಯ ಇಲಾಖೆ ಮತ್ತು ಔಷಧಿ ತಯಾರಕರು ಏನು ಸಂಬಂಧವನ್ನು ಇಟ್ಟುಕೊಂಡಿದ್ದಾರೆಂಬುದನ್ನು ತಾವು ನೋಡಿ. ಕಳೆದ ಅನೇಕ ವರ್ಷಗಳಿಂದ ಇದೇ ಕಂಪೆನಿಯವರೇ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ಬೇರೆಯವರಿಗೆ ಅಲ್ಲಿ ಅವಕಾಶವಿಲ್ಲ. ತಾವು ಈ ರ್ಯಾಕೆಟ್‌ನ್ನು ಮುರಿಯಬೇಕು. ತಾವು ಕೊಡತಕ್ಕ ಹಣ ಸಾರ್ವಜನಿಕವಾಗಿ ಏನು ಬರುತ್ತದೆ ಅದು ಬಡ ಜನತೆಗೆ, ಬಡ ರೋಗಿಗಳಿಗೆ ಮುಟ್ಟತಕ್ಕ ವ್ಯವಸ್ಥೆ ಆಗಬೇಕು. ನಾನು ಈಗಾಗಲೇ ಹೇಳಿದಂತೆ ಈ ವಿಚಾರದಲ್ಲಿ ತೀವ್ರ ಆಸಕ್ತಿ ವಹಿಸಿ ಸಿ.ಓ.ಡಿ. ಎನ್‌ಕ್ವೈರಿಗೆ ಇದನ್ನು ವಹಿಸುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸರ್‌ನಾಯಕ್ ಅಜಯಕುಮಾರ್ ಸಾಂಬಸದಾಶಿವ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಔಷಧಿ ಖರೀದಿಯಲ್ಲಿ ಆಗಿರಬಹುದಾದ ದುರ್ವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಇದು ಬಹಳ ಗಂಭೀರವಾದುದು. ನಾನು ಒಂದು ಮಾತನ್ನು ಹೇಳುವುದಾದರೆ, ಇದೇ ರೀತಿ ನಮ್ಮ ಭಾಗದಲ್ಲಿ

ದವಾಖಾನೆಗಳಲ್ಲಿ ಔಷಧಿ ಇಲ್ಲ, ಟ್ಯಾಬ್ಲೆಟ್ಸ್ ಇಲ್ಲ ಇದನ್ನು ಒದಗಿಸಬೇಕೆಂದು ನಾವು ಡಿ.ಹೆಚ್.ಒ.ರವರನ್ನು ರಿಕ್ವೆಸ್ಟ್ ಮಾಡಿದಾಗ, ನಮಗೆ ಬಜೆಟ್ಟೇ ಇಲ್ಲವೆಂದು ಅವರು ನಮಗೆ ಹೇಳುತ್ತಿದ್ದರು. ಆದರೆ ಇಲ್ಲ ನೋಡಿದರೆ ಇಷ್ಟೊಂದು ಅವ್ಯವಹಾರವಾಗಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಇನ್ನೊಂದು ವಿಚಾರ ಎಂದರೆ, ಅಧಿಕಾರಿಗಳು ಅವ್ಯವಹಾರ ಮಾಡಿರುವ ಅನೇಕ ವಿಚಾರಗಳನ್ನು ನಾವು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಹೀಗೆ ನಮ್ಮ ಬಾಗಲಕೋಟೆ ತಾಲೂಕಿನಲ್ಲಿ ಅಲ್ಲಿಯ ಅಸಿಸ್ಟೆಂಟ್ ಕಮಿಷನರ್‌ರವರು ಒಂದು ಫ್ರಾಡ್ ಮಾಡಿದ್ದರು. ಇದನ್ನು ಹಗಲು ದರೋಡೆ ಎಂದು ಕರೆದರೂ ಅಡ್ಡಿ ಇಲ್ಲ. ಒಂದು ಎಲ್.ಐ.ಸಿ. ಕೇಸ್‌ನಲ್ಲಿ ಕೋರ್ಟ್ ಪೇಮೆಂಟ್ ಆಗಿದೆ. ಆದರೂ ಅದಕ್ಕೆ ಇವರು ಡಬಲ್ ಪೇಮೆಂಟ್ ಮಾಡಿದ್ದಾರೆ. ಈ ವಿಚಾರದ ಬಗ್ಗೆ ನಾವು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಆ ಅಧಿಕಾರಿಯ ವಿರುದ್ಧ ಯಾವುದೇ ಕ್ರಮವನ್ನೂ ಕೂಡ ಸರ್ಕಾರ ತೆಗೆದುಕೊಳ್ಳಲಿಲ್ಲ. ಸಸ್ಪೆಂಡ್ ಆಗಿದ್ದ ಆ ಅಧಿಕಾರಿಯನ್ನು ಮತ್ತೆ ಕೆಲಸದ ಮೇಲೆ ತೆಗೆದುಕೊಂಡರು. ಯಾವುದೇ ಭ್ರಷ್ಟ ಅಧಿಕಾರಿಯ ವಿರುದ್ಧ ನಾವು ಇಲ್ಲಿ ಪ್ರಸ್ತಾಪ ಮಾಡುವುದು ಹಾವನ್ನು ಬಡಿದು ಹದ್ದಿಗೆ ಹಾಕಿದಂತೆ. ನಾವು ಇಲ್ಲಿ ಪ್ರಸ್ತಾಪ ಮಾಡಿದಂಥ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೇ ಹೋಗುವುದಾದರೆ ನಾವು ಅಂಥ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದೇ ಬೇಡ. ಇನ್ನು ಮುಂದಾದರೂ ಇಂಥ ಭ್ರಷ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಮ್ಮ ವಿನಂತಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಡಾ. ಬಾಲರಾಜ್ ಎನ್ನುವರು ಬಜಾಪುರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿದ್ದರು. ಇವರು ಮಾಡಿರುವ ಔಷಧಿ ಖರೀದಿ ಮತ್ತು ನೇಮಕಾತಿಯ ಬಗ್ಗೆ ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ನಾಯಕರು ಎತ್ತಿದ್ದಾರೆ. ಅಕ್ಟೋಬರ್ 92 ರಲ್ಲಿ ಈ ಅಧಿಕಾರಿ ಔಷಧಿ ಮತ್ತು ಬ್ಯಾಂಡೇಜ್ ವಸ್ತುಗಳನ್ನು ಖರೀದಿ ಮಾಡುವಾಗ ಸರ್ಕಾರದ ಆದೇಶಗಳನ್ನು ಪಾಲಿಸದೆ, ಮತ್ತು ಅಗತ್ಯವಿರುವುದಕ್ಕಿಂತ ಹೆಚ್ಚಿಗೆ ಖರೀದಿಸಿ ಸರ್ಕಾರಕ್ಕೆ ನಷ್ಟವನ್ನುಂಟು ಮಾಡಿರುತ್ತಾರೆಂಬ ದೂರು ಸರ್ಕಾರಕ್ಕೆ ಬಂದಿದೆ. ಈ ದೂರಿನ ಸತ್ಯಾಸತ್ಯತೆಗಳನ್ನು ಕಂಡುಹಿಡಿಯುವುದಕ್ಕೆ ನಾವು ಒಬ್ಬ ಜಂಟ ನಿರ್ದೇಶಕರನ್ನು ಅಲ್ಲಿಗೆ ಕಳುಹಿಸಿ ಕೂಡಲೇ ವಿಚಾರಣೆ ನಡೆಸಿ ಅದರ ವರದಿಯನ್ನು ಸಲ್ಲಿಸಬೇಕೆಂದು ನಾವು ಹೇಳಿದ್ದೇವೆ. ತಾ: 10-12-92ರಂದು ನಿರ್ದೇಶಕರಿಗೆ ಪತ್ರ ಬರೆದು ತಕ್ಷಣ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕೆಂದು ತಿಳಿಸಿದ್ದೇವೆ. ಈ ಮಧ್ಯೆ ಅಲ್ಲಿನ ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರು ಈ ವೈದ್ಯರ ಬಗ್ಗೆ ಬರೆದಿರುವ ಪತ್ರದ ಆಧಾರದ ಮೇಲೆ ಈ ವೈದ್ಯರನ್ನು ತಾ: 18-1-93ರಂದು ಬಿಜಾಪುರದಿಂದ ವರ್ಗ ಮಾಡಿದ್ದೇವೆ. ಈ ವೈದ್ಯರು ಗುಲ್ಬರ್ಗಾದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಪಡೆದುಕೊಂಡು ಕುಷ್ಠ ರೋಗದಿಂದ ಗುಣಮುಖರಾಗಿದ್ದಾರೆಂದು ಹೇಳಲಾಗಿರುವ ವ್ಯಕ್ತಿಗಳಿಗೆ ಗ್ರೂಪ್ ಡಿ. ವರ್ಗದ ನೌಕರಿಯನ್ನು ಕೊಟ್ಟಿದ್ದಾರೆಂಬ ಆಪಾದನೆ ಇದೆ. ಈ ಆಪಾದನೆಗಳು ಅತ್ಯಂತ ಗುರುತರವಾಗಿವೆ. ಈ ವೈದ್ಯರ ಮೇಲೆ ಮಾಡಿರುವ 2 ಆಪಾದನೆಗಳೂ ಬಹಳ ಗಂಭೀರವಾಗಿದ್ದು ಮೇಲ್ನೋಟಕ್ಕೆ ಇದು ನಿಜ ಎಂದು ನಮಗೆ ಮನವರಿಕೆಯಾಗಿರುವುದರಿಂದ ಡಾ:ಬಾಲರಾಜ್ ಎನ್ನುವವರನ್ನು ನಾವು ಅಮಾನತ್ತುಗೊಳಿಸಿದ್ದೇವೆ. ಇದರ ಬಗ್ಗೆ ತನಿಖೆಗಾಗಿ ಉಪ ಲೋಕಾಯುಕ್ತಕ್ಕೆ ನಾವು ಕಳುಹಿಸಿಕೊಟ್ಟಿದ್ದೇವೆ.

ಇನ್ನು ಒಬ್ಬ ಗೆಜೆಟೆಡ್ ಅಸಿಸ್ಟೆಂಟ್ ವಿಚಾರದಲ್ಲಿ ಏನು ತಾವು ಪ್ರಸ್ತಾಪ ಮಾಡಿದ್ದೀರಿ ಇದರ ಬಗ್ಗೆ ನಮಗೆ ಇರುವವರೆಗೂ ಸರಿಯಾಗಿ ಮಾಹಿತಿ ಬಂದಿಲ್ಲ. ಇವತ್ತೋ, ನಾಳೆಯೋ ಅಲ್ಲಿಯ ಜಿಲ್ಲಾಧಿಕಾರಿಯವರ ವರದಿ ಬರುತ್ತದೆ. ಆ ವರದಿ ಬಂದ ಕೂಡಲೇ ತಾವು ಹೇಳಿರುವ ಗೆಜೆಟೆಡ್ ಅಸಿಸ್ಟೆಂಟ್ ವಿರುದ್ಧ ಕೂಡ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ನಾವು ಯಾರನ್ನೂ ಷೀಲ್ಡ್ ಮಾಡುವ ಪ್ರಶ್ನೆ ಬರುವುದಿಲ್ಲ. ಯಾರು ತಪ್ಪಿತಸ್ಥರಿದ್ದಾರೆ ಅವರು ತಾವಾಗಿಯೇ ಶಿಕ್ಷೆಯನ್ನು ಅನುಭವಿಸುತ್ತಾರೆ. ಆದ್ದರಿಂದ ನಾವು ಯಾರಿಗೂ

ರಕ್ಷಣೆಯನ್ನು ಕೊಡತಕ್ಕ ಪ್ರಶ್ನೆ ಇದರಲ್ಲಿಲ್ಲ. ಗೆಜೆಟೆಡ್ ಆಸಿಸ್ಟೆಂಟ್ ಬಗ್ಗೆ ಜಿಲ್ಲಾಧಿಕಾರಿಯವರಿಂದ ವರದಿ ಬಂದು ಅದರಲ್ಲಿ ಮೇಲ್ನೋಟಕ್ಕೆ ಇವರು ತಪ್ಪಿತಸ್ಥರೆಂದು ತಿಳಿದು ಬಂದರೆ ಕೂಡಲೇ ಅವರ ವಿರುದ್ಧ ಕ್ರಮ ತೆಗೆದುಕೊಂಡು ಅಮಾನತ್ತಿನಲ್ಲಿಡುತ್ತೇವೆ.

ಶ್ರೀ ಆರ್.ಐ. ದೇಶಪಾಂಡೆ:- ಆ ಡಿ.ಹೆಚ್.ಓ.ರವರನ್ನು ಸಸ್ಪೆಂಡ್ ಮಾಡುತ್ತೇವೆಂದು ತಾವು ಹೇಳಿದ್ದು ಸಂತೋಷ. ಆದರೂ ಇದರ ಬಗ್ಗೆ ಸಿ.ಓ.ಡಿಯಿಂದ ಎನ್‌ಕ್ವೈರಿ ಮಾಡಿಸಬೇಕೆಂದು ನಾನು ಹೇಳಿದ್ದೇನೆ. ನಿಮ್ಮ ಚಾಯಿಂಟ್ ಡೈರೆಕ್ಟರ್‌ರವರು ಇದರ ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಅಧಿಕಾರಿ ಲೆಪ್ರೆಸಿ ರೋಗಿಗಳು ಗುಣವಾಗಿದ್ದಾರೆಂದು 56 ಜನರಿಗೆ ನೌಕರಿ ಕೊಟ್ಟಿದ್ದಾನೆ, ಮಂಡ್ಯ ಮತ್ತು ಕೋಲಾರಗಳಿಂದ ಡಾಕ್ಯುಮೆಂಟ್ಸ್‌ನ್ನು ಕಲೆಕ್ಟ್ ಮಾಡಿದ್ದಾನೆ ಇಂಥ ಬಹಳ ಗಂಭೀರ ಆಪಾದನೆಗಳು ಇವನ ಮೇಲಿರುವಾಗ ಉಪ ಲೋಕಾಯುಕ್ತದವರು ಇದರ ಬಗ್ಗೆ ಏನು ಮಾಡುವುದಕ್ಕೆ ಸಾಧ್ಯತೆ ಇದೆ? ಇದು ಬಹಳ ಗಂಭೀರ ವಿಚಾರವಾಗಿರುವುದರಿಂದ ಇದನ್ನು ಸಿ.ಒ.ಡಿ.ಗೆ ಒಪ್ಪಿಸುವುದಕ್ಕೆ ಹಿಂದುಮುಂದು ನೋಡಬೇಡಿ. ಇದನ್ನು ನೀವು ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಎರಡನೆಯದಾಗಿ, ಇವನು ಯಾರ್ಯಾರ ಕಡೆಯಿಂದ ಔಷಧಿಗಳನ್ನು ಖರೀದಿ ಮಾಡಿದ್ದಾನೆ ಅದು ಜನರಿಗೆ ಗೊತ್ತಾಗಬೇಕು, ಆ ಕಂಪೆನಿಗಳ ಹೆಸರು ಹೊರಗೆ ಬರಬೇಕು. ಸತ್ಯಾಂಶ ಹೊರಗೆ ಬರಬೇಕಾದರೆ ಇವರಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರಕ್ಕೆ ನಿಜವಾಗಿ ಇದರಲ್ಲಿ ಆಸಕ್ತಿ ಇದ್ದರೆ ಇದನ್ನು ಸಿ.ಒ.ಡಿಯಿಂದ ಮಾಡಿಸಬೇಕಾಗುತ್ತದೆ.

ಇನ್ನೊಂದು ವಿಚಾರ ಎಂದರೆ, ಹೆಲ್ತ್ ಡಿಪಾರ್ಟ್‌ಮೆಂಟ್ ಮತ್ತು ಕೆಲವು ಕಂಪೆನಿಗಳದ್ದು ಒಂದು ದೊಡ್ಡ ರ‍್ಯಾಕೆಟ್ ಇದೆ. ಅದು ಹೇಗೆಂದರೆ, ಕೆಲವು ಕಂಪೆನಿಗಳೇ ಇಲ್ಲ. ಆದರೂ ಅವರು 10-20 ವರ್ಷಗಳಿಂದ ಔಷಧಿಗಳನ್ನು ಸಪ್ಲೈ ಮಾಡುತ್ತಲೇ ಇದ್ದಾರೆ. ತಾವು ಬೇಕಾದರೆ ರೆಕಾರ್ಡ್ಸ್‌ನ್ನು ತೆಗೆದುನೋಡಬಹುದು. ಅನೇಕ ವರ್ಷಗಳಿಂದ ಇದೇ ಕಂಪೆನಿಗಳೇ ಇವೆ. ನನಗೆ ಅವುಗಳ ಹೆಸರೂ ಕೂಡ ಗೊತ್ತು. ಆದರೆ ಅದನ್ನು ನಾನು ಹೇಳುವುದಿಲ್ಲ. ಏಕೆಂದರೆ ಇದರ ಬಗ್ಗೆ ಅಫೆಂಟಿಕೇಟೆಡ್ ಇನ್‌ಫರ್ಮೇಷನ್ ನನ್ನ ಹತ್ತಿರ ಇಲ್ಲ. ನಾನು ಹೇಳಿದಂತೆ ತಾವು ಕಳೆದ 10-20 ವರ್ಷಗಳ ರೆಕಾರ್ಡ್ಸ್‌ನ್ನು ತೆಗೆದುನೋಡಿದರೆ ಗೊತ್ತಾಗುತ್ತದೆ, ಅದೇ ಕಂಪೆನಿಗಳ ಹೆಸರುಗಳಿವೆ. ಇವುಗಳಲ್ಲಿ ಕೆಲವು ಕಂಪೆನಿಗಳೇ ಇಲ್ಲ. ಆದರೂ ಇದು ನಡೆಯುತ್ತಲೇ ಇದೆ. ಇದು ಬಹಳ ದೊಡ್ಡ ರಾಕೆಟ್ ಆಗಿರುವುದರಿಂದ ತಾವು ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡಿಸಿದರೆ ಬೇರೆಯವರಿಗೆ ಒಂದು ರೀತಿಯ ಭಯ ಹುಟ್ಟುವುದಲ್ಲದೆ ಈಗ ನಡೆದಿರುವುದರಲ್ಲಿ ಸತ್ಯಾಂಶ ಹೊರಗೆ ಬರಬಹುದೆಂದು ತಮಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಸಿ.ಓ.ಡಿಗೆ ಯಾವು ಯಾವುದನ್ನು ವಹಿಸಬಹುದು ಎಂದು ತಮಗೆ ನಾನು ಹೇಳುತ್ತೇನೆ. We have a bureau headed by our Additional DGP, a bureaucy which will look into all these things. Sri Jagannathan is there. Upa Lok Ayukta, Lok Ayukta - that is also equally powerful body. ಎಲ್ಲಾ ಲೋಕಾಯುಕ್ತ, ಉಪ ಲೋಕಾಯುಕ್ತದಲ್ಲಿದೆ. ಅಲ್ಲಿರುವ ಜಗನ್ನಾಥನ್ ಎಂಬುವವರು ತಮಗೆ ಗೊತ್ತಿದೆ. ಈಗ ಅದನ್ನು ಕೂಡ ಎಷ್ಟು ಬಲಪಡಿಸಬೇಕೋ ಅಷ್ಟು ಬಲಪಡಿಸಿದ್ದೇವೆ. They will look into the matter. ಆದರೆ, ಎಲ್ಲವನ್ನೂ ಸಿ.ಓ.ಡಿಗೆ ಹಾಕಿದರೆ ಅವರಿಗೆ ಸಮಯ ಇರುವುದಿಲ್ಲ. ಮತ್ತು ಉಪ ಲೋಕಾಯುಕ್ತಕ್ಕೆ ಕಳುಹಿಸಿದರೂ ಕೂಡ that is also an equally and a more competent authority. ರೆಕವರಿ ಮಾಡುವಂಥಾದ್ದು ಇರಬಹುದು, ಯಾರಾದರೂ ದುರುಪಯೋಗ ಮಾಡಿರುವುದು ಇರಬಹುದು.

Let us see. Upa Lok Ayukta is the real competent authority to look into these things. We have strengthened that organisation. They are already on the job to find out many of the corrupt officers. They are doing wonderful things. I don't think.....

SRI R.V. DESHPANDE: There is a racket.

SRI M. VEERAPPA MOILY: We will burst that racket. You don't worry. Any racket either in this drug manufacturing or any other thing in which they are playing with the life of the people, I will see that it is exploded once and for all. ಅದನ್ನು ಮೂಲೋಚ್ಚಾಟನೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. You leave it to me.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಏನು ಸಲಹೆ ಮಾಡಿದೆನೆಂದರೆ, ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಹತ್ತಿರ ಆರೋಗ್ಯ ಇಲಾಖೆ ಇದೆ. ಆದುದರಿಂದ, ದಯಮಾಡಿ ನಿಮಗೆ ಸಮಯ ಸಿಕ್ಕಿದಾಗ ಕಳೆದ 15-20 ವರ್ಷಗಳ ರೆಕಾರ್ಡ್ ತೆಗೆಯಿರಿ....

SRI M. VEERAPPA MOILY: I am telling. I wanted to tell that. I forgot it. We have already had number of sittings. ಬಹಳ ಮಾತುಕತೆಯಾಡಿ ಯಾರು ಇದರ ಬಗ್ಗೆ ಅನಾವಶ್ಯಕವಾದಂಥ ದುರ್ಲಾಭ ಪಡೆಯತಕ್ಕಂಥ, ರಾಕೆಟ್ ಮಾಡತಕ್ಕಂಥಾದ್ದು ಮತ್ತು ಸರಿಯಾದ ಮೆಡಿಸಿನ್, ಡ್ರಗ್ಸ್, ಕೊಡದಿರುವಂಥ ಪರಿಸ್ಥಿತಿಯನ್ನು ನಿಲ್ಲಿಸಬೇಕೆಂದು ಈಗಾಗಲೇ ಪರ್ಚೇಸ್ ಪಾಲಿಸಿಯನ್ನು ನಾವು ಬದಲಾವಣೆ ಮಾಡುತ್ತಿದ್ದೇವೆ. ಇದು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಕೂಡ ಗೊತ್ತಿದೆ, ತಾವು ಕೂಡ ಸರ್ಕಾರದಲ್ಲಿದ್ದೀರಿ. ನಾವು ಅನೇಕ ಬಾರಿ ತಪ್ಪು ಮಾಡುವುದಕ್ಕೆ ಅವಕಾಶ ಕೊಡುವುದು, ಆ ಸಿಸ್ಟಮ್ ಹೇಗಿರುತ್ತದೆಂದರೆ, ಎಲ್ಲರೂ ದರೋಡೆ ಮಾಡಿಕೊಂಡು ಹೋಗತಕ್ಕಂಥ ಸಿಸ್ಟಮ್ ಅನ್ನು ನಾವು ಅಡಾಪ್ಟ್ ಮಾಡಿದ್ದೇವೆ. ಆ ಸಿಸ್ಟಮ್‌ಗೆ ನಾವು ಬದಲಾವಣೆ ಮಾಡಿದರೆ ಮಾತ್ರ ಇಂತಹ ಅವ್ಯವಹಾರಗಳನ್ನು ನಿಲಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, We are thoroughly changing the purchase policy. ಈ ವ್ಯವಸ್ಥೆಯಲ್ಲಿ ಸರಿಯಾದ, ನಿಸ್ಪೃಹವಾದಂಥ ಒಂದು ಪದ್ಧತಿಯನ್ನು ಮಾಡಿದಾಗ ಈ ಎಲ್ಲಾ ಹೆಗ್ಗಣಗಳು ಒಳಗಡೆ ಪ್ರವೇಶಿಸುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ, ಈ ಬಗ್ಗೆ ನಾವು ಒಂದು Separate purchase policy, ಮಾಡಿ we are going to evolve it shortly.

ವಿಷಯ(2) ಪುಲವಳ್ಳಿ ಗ್ರಾಮದ ಇನಾಂತಿ ಜಮೀನಿನ ಬಗ್ಗೆ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್(ಕಿತ್ತೂರು):- ಸನ್ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ತಾಲ್ಲೂಕಿನ ಪುಲವಳ್ಳಿ ಗ್ರಾಮದಲ್ಲಿ ಸುಮಾರು 11 ಸಾವಿರ ಎಕರೆ ಜಮೀನಿಗೆ ಸಂಬಂಧಿಸಿದಂತೆ ನಾನು ದಿನಾಂಕ 5.9.91 ರಂದು ಒಂದು ಪ್ರಶ್ನೆ ಕೇಳಿದ್ದೆ. ಈ ಬಗ್ಗೆ ನಾನು ಸ್ವಲ್ಪ ವಿವರಣೆ ಕೊಡಬೇಕಾಗುತ್ತದೆ. ಸಂಗೊಳ್ಳಿ ರಾಯಣ್ಣನನ್ನು ಹಿಡಿದು ಕೊಟ್ಟಿದ್ದಕ್ಕೆ ಕೊಲ್ಲಾಪುರ ಮತ್ತು ನೇಗಿನಹಾಳ ಗ್ರಾಮದ ಇನಾಮದಾರರಿಗೆ ಬಹುಮಾನವಾಗಿ ಕೊಟ್ಟಂಥ ಜಮೀನು ಇದಾಗಿದೆ. ಅದರ ಪೈಕಿ 11 ಸಾವಿರ ಎಕರೆ ಜಮೀನು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪುಲವಳ್ಳಿ ಗ್ರಾಮದಲ್ಲಿದೆ. ಈ ಜಮೀನಿನದು ಬಹಳ ದೊಡ್ಡ ಕಥೆಯಾಗಿದೆ. ಆ ಇನಾಮದಾರರು ಈ ಜಮೀನನ್ನು ಸಾವಿರಾರು ಕುಟುಂಬಗಳಿಗೆ ಕೊಟ್ಟಿದ್ದರು. ಅನಂತರ 1955ನೇ ಇಸವಿಯಲ್ಲಿ ಇಂಡಿಯನ್ ಫಾರೆಸ್ಟ್ ಆಕ್ಟ್‌ನ ಸೆಕ್ಷನ್ 35ರಡಿಯಂತೆ, ಈ ಜಮೀನು ಫಾರೆಸ್ಟ್ ಎಂದು ಬರಬೇಕು, ಆದರೆ, ಜಮೀನುಗಳಿಗೆ ರೈತರ ಹೆಸರುಗಳನ್ನು ನಮೂದಿಸಲಿಲ್ಲ. ಅನಂತರ, ಇನಾಮದಾರರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಆ ಜಮೀನು ಇನಾಮದಾರರ ಪರವಾಯಿತು. 'ನೀವು ವೆಜಿಟೇಷನ್ ಮ್ಯಾನೇಜ್ ಮೆಂಟ್ ಅನ್ನು ವಹಿಸಿಕೊಳ್ಳಬಹುದೇ ಹೊರತು ಓನರ್ ಶಿಪ್